**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
ಸಿಸಿ ನಂಬರ್ **34/2024**

| | | |
|---|---|---|
| ಸಾಕ್ಷಿಯ ಹೆಸರು | : ಉಮೇಶ್ ಆರ್ | ಸಿ.ಡಬ್ಲ್ಯು 14 |
| ತಂದೆಯ ಹೆಸರು | : ಹೆಚ್ ರಾಜು | ಪಿ.ಡಬ್ಲ್ಯು 12 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಚಾಲಕ | |
| ವಾಸ ಸ್ಥಳ | : ಕಾಳಿಂಗನಹಳ್ಳಿ | |

ದಿನಾಂಕಃ**02-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಚಾಸಾ-15 ಮತ್ತು ಆರೋಪಿಯ ಪರಿಚಯ ಇರುತ್ತದೆ. ಆರೋಪಿಯು ನನಗೆ ತಿಪಟೂರು ಜೈಲಿನಲ್ಲಿ ಇರುವಾಗ 2 ವರ್ಷದ ಹಿಂದೆ ಪರಿಚಯ ಆಗಿತ್ತು. ಈಗ ಒಂದು ವರ್ಷದ ಹಿಂದೆ ಆರೋಪಿ ನಮ್ಮ ಊರಿಗೆ ಬಂದು ಚಾಸಾ-15 ಇವರ ಬಗ್ಗೆ ವಿಚಾರ ಮಾಡಿದರು. ಆ ಸಮಯಕ್ಕೆ ಆರೋಪಿ ಕಾರಿನಲ್ಲಿ ನಮ್ಮ ಊರಿಗೆ ಬಂದಿದ್ದರು. ನಾನು ಸಂಜು ಈತನನ್ನು ಕರೆಸಿದಾಗ ಇಬ್ಬರೂ ನಮ್ಮ ಮನೆಯಲ್ಲಿ ಸ್ವಲ್ಪ ಹೊತ್ತು ಮಾತನಾಡಿದರು. ಆರೋಪಿ ನನ್ನನ್ನು ಮತ್ತು ಚಾಸಾ-15 ಇವರನ್ನು ಹಣ ಸಹಾಯ ಮಾಡುವಂತೆ ಕೇಳಿದನು. ನಾವು ದುಡ್ಡು ಇಲ್ಲ ಎಂದು ಹೇಳಿದ ಕಾರಣ ಎರಡು ಬಂಗಾರದ ಉಂಗುರ ಮತ್ತು ಬೆಳ್ಳಿಯ ಚೈನು ಕೊಟ್ಟು ಒತ್ತೆ ಇಟ್ಟು ಹಣ ಕೊಡಿಸುವಂತೆ ಕೇಳಿದನು. ನಮಗೆ ಅನುಮಾನ ಬಂದ ಕಾರಣ ನಾನು ಹಣವನ್ನು ಕೊಡಿಸಲಿಲ್ಲ. ಒಂದು ತಿಂಗಳ ನಂತರದಲ್ಲಿ ತರೀಕೆರೆಯ ಪೊಲೀಸರು ನನಗೆ ಈ ಬಗ್ಗೆ ಫೋನ್ ಮಾಡಿ ವಿಚಾರಿಸಿದರು. ಪೊಲೀಸರು ಕೇಳಿದ ಕಾರಣಕ್ಕೆ ಆರೋಪಿಯು ನನಗೆ ಕೊಟ್ಟಿದ್ದ ಉಂಗುರುಗಳು ಮತ್ತು ಚೈನನ್ನುಪೊಲೀಸರಿಗೆ ಕೊಟ್ಟಿದ್ದೇನೆ . ಪೊಲೀಸರು ಸದರಿ ವಸ್ತುಗಳನ್ನು ಆರೋಪಿ ತರೀಕೆರಯಲ್ಲಿಯೇ ಕಳುವು ಮಾಡಿದ್ದಾನೆ ಎಂದು ತಿಳಿಸಿದನು. ನಾನು ಠಾಣೆಗೆ ಬಂದಾಗ ಆರೋಪಿ ಕೂಡ ಅಲ್ಲಿಯೇ ಇದ್ದ , ಪೊಲೀಸರು ಆತನನ್ನು ಉಡುಪಿಯಿಂದ ಕರೆತಂದಿದ್ದೇವೆ ಎಂದು ತಿಳಿಸಿದರು. ನನ್ನ ಸಹಿಯನ್ನು ನೋಡಿದರು ಗುರುತಿಸಬಲ್ಲೆ. ನಿ.ಪಿ-16 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ-16(ಇ) ಎಂದು ಗುರುತಿಸಲಾಯಿತು. ನಾನು ಕೊಟ್ಟ ವಸ್ತುಗಳನ್ನು ಜಪ್ತಿ ಮಾಡಿಕೊಂಡಾಗ ನಿ.ಪಿ-16 ರಂತೆ ಜಪ್ತಿ ಪಂಚನಾಮೆ ಜರುಗಿಸಿ ನಿ.ಪಿ-17 ರಿಂದ 20 ರಂತೆ ಫೋಟೋ ತೆಗೆದಿದ್ದಾರೆ. ನಿ.ಪಿ-8 ರಿಂದ 10 ರಲ್ಲಿ ಕಾಣುವ ವಸ್ತುಗಳನ್ನೇ ನಾನು ಪೊಲೀಸರ ಮುಂದೆ ಹಾಜರು ಮಾಡಿದ್ದೇನೆ. ನಂತರದಲ್ಲಿ ಕಾರನ್ನು ಕೂಡ ಆರೋಪಿ ತರೀಕೆರೆಯಿಂದ ಕಳ್ಳತನ ಮಾಡಿಕೊಂಡು ಹೋಗಿದ್ದಾನೆ ಎಂದು ಗೊತ್ತಾಯಿತು. ಸಾಕ್ಷಿಯು ವಿಸಿ ಮೂಲಕ ತೋರಿಸಲಾದ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ತಿಪಟೂರಿನ ಒಂದು ಕಳ್ಳತನ ಪ್ರಕರಣದಲ್ಲಿ ನಾನು ಆರೋಪಿಯ ಗೆಳೆಯ ಎಂದು ಆರೋಪಿಸಿ ನನ್ನ ಮೇಲೆ ಕಳ್ಳತನ ಪ್ರಕರಣವನ್ನು ಹಾಕಲಾಗಿತ್ತು, ಆ ಪ್ರಕರಣದಲ್ಲಿ ನಾನು ತಿಪಟೂರು ಜೈಲಿನಲ್ಲಿ ಇದ್ದೆನು. ನಾನು ಮತ್ತು ಮಂಜುನಾಥ ಒಂದೇ ಸೆಲ್ ನಲ್ಲಿ ಇದ್ದೆವು. ಅಲ್ಲಿ ಇರಬೇಕಾದರೆ ಆರೋಪಿ ಮಂಜುನಾಥ ತನ್ನ ವೈಯಕ್ತಿಕ ವಿಷಯಗಳನ್ನು ನಮ್ಮ ಜೊತೆ ಹಂಚಿಕೊಳ್ಳುತ್ತಿರಲಿಲ್ಲ. ಆರೋಪಿ ನಮ್ಮ ಊರಿಗೆ ಬಂದಾಗ ಆತನ ಜೊತೆ ಯಾರೂ ಇರಲಿಲ್ಲ. ಆತನೇ ಚಾಲನೆ ಮಾಡಿಕೊಂಡು ಬಂದಿದ್ದ. ಕಾರು ತನ್ನದೇ ಎಂದು ನನಗೆ ತಿಳಿಸಿದ್ದನು. ನನಗೆ ಕಾರಿನ ನಂಬರ್ ಮತ್ತು ಕಲರ್ ಈಗ ನೆನಪಿಲ್ಲ. ಜೈಲಿನಲ್ಲಿ ಇರಬೇಕಾದರೆ ನನ್ನ ಮತ್ತು ಆರೋಪಿಯ ನಡುವೆ ಮನಸ್ತಾಪಗಳು ಇದ್ದವು ಎಂದರೆ ಸಾಕ್ಷಿಯು ಕಸ ಹೊಡೆಯಲು, ಸೆಲ್ ಸ್ವಚ್ಛ ಮಾಡಲು ಆಗಾಗ ಮನಸ್ತಾಪ ಬರುತ್ತಿತ್ತು ಎಂದು ಹೇಳುತ್ತಾರೆ. ಇದೇ ಕಾರಣಕ್ಕೆ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ತಂದು ಕೊಟ್ಟಿದ್ದ ಎನ್ನಲಾಗುವ ಆಭರಣಗಳು ಯಾರಿಂದ ಮತ್ತು ಎಲ್ಲಿ ಕಳ್ಳತನ ಮಾಡಿದ್ದ ಎಂದು ನನಗೆ ಗೊತ್ತಿಲ್ಲ. ಆರೋಪಿ ನನ್ನ ಬಳಿ ಯಾವುದೇ ವಸ್ತುಗಳನ್ನು ಒತ್ತೆ ಇಡುವಂತೆ ಕೊಟ್ಟಿರಲಿಲ್ಲ, ಅದೇ ಕಾರಣಕ್ಕೆ ನಾನು ಒತ್ತೆ ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರೇ ಆಭರಣಗಳನ್ನು ನನಗೆ ತಂದು ಕೊಟ್ಟು ತಮಗೆ ವಾಪಾಸ್ಸು ಕೊಡುವಂತೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರ ಮಾತಿಗೆ ಕಟ್ಟು ಬಿದ್ದು ಆರೋಪಿಯ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ನಾನು ಹೇಳುತ್ತಿರುವ ಆಭರಣಗಳಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಪೊಲೀಸರು ಹೇಳಿದ ರೀತಿ ನಿಂತು ಫೋಟೋಗಳನ್ನು ತೆಗೆಸಿಕೊಂಡಿದ್ದೇನೆ ಎಂದರೆ ಸರಿ.

ಮರುವಿಚಾರಣೆ : ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.